# ಶ್ರೀ ವಿಜಯರಾಯರ ಕಾರುಣ್ಯ

ಶ್ರೀರಾಘವೇಂದ್ರವಂಶೀ., ಮಂತ್ರಾಲಯ – ಬೆಂಗಳೂರು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸ ಸಾಹಿತ್ಯವೂ ಒಂದು. ಕನ್ನಡ ಜನಕ್ಕೆ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದ ಪ್ರೌಢ ಕವಿಗಳು, ರಚನಕಾರರು ಗೊತ್ತಿರಲೀ ಬಿಡಲೀ ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ವಿರಳ.

ಬದುಕಿನ ಎಲ್ಲಾ ಮಗ್ಗಲುಗಳನ್ನು ನೋಡಿ, ಪ್ರಪಂಚವನ್ನು ವಿಸ್ತಾರವಾಗಿ ಕಂಡು, ಜೀವನದ ನೈಜ ಸ್ವರೂಪವನ್ನು ಅರ್ಥ ಮಾಡಿಕೊಂಡು ಸಂಪತ್ತನ್ನೆಲ್ಲಾ ದಾನ ಮಾಡಿ, ಹರಿದಾಸರಾಗಿ ಜೀವನದ ಗುಟ್ಟನ್ನು ಬಿಚ್ಚಿ, ಸದ್ಗತಿ ಪಡೆಯಲು ಸಾಧನಾ ಕ್ರಮವನ್ನು ಬೀದಿ–ಬೀದಿ, ಕೇರಿ–ಕೇರಿ, ಮನೆ ಗುಡಿಸಲುಗಳೆನ್ನದೇ ಎಲ್ಲೆಡೆಯೂ ಅಲೆದಾಡಿ, ಹಾಡಿ–ಹಾಡಿ ತಿಳಿ ಹೇಳಿ ಕುಣಿದಾಡಿದವರು ನಮ್ಮ ಈ ಹರಿದಾಸರುಗಳು.

ಹರಿದಾಸ ಸಾಹಿತ್ಯದ ಮೂಲಸ್ಫೂರ್ತಿಗಳು 13ನೇ ಶತಮಾನದವರಾದ ಶ್ರೀಮದಾನಂದತೀರ್ಥರೇ ಪ್ರಪ್ರಥಮ ಹರಿದಾಸರು.

ಮುಂದೆ 18ನೇ ಶತಮಾನದಲ್ಲಿ ಅವತರಿಸಿದ ಭೃಗು ಮಹರ್ಷಿಗಳ ಅಂಶ ಸಂಭೂತರಾದ ಶ್ರೀವಿಜಯದಾಸರು ಹಿಂದಿನಿಂದ ನಡೆದು ಬಂದ ಈ ಹರಿದಾಸ ಸಾಹಿತ್ಯವು ಇಂದಿನ ವರೆಗೂ ಮುಂದುವರೆಯುವಂತೆ ಮಾಡಿ ತಮ್ಮ ಪದ–ಪದ್ಯ–ಸುಳಾದಿ–ಉಗಾಭೋಗಗಳ ಮೂಲಕ ದಾಸ ಸಾಹಿತ್ಯ ಸಂಪತ್ತನ್ನು ಬೆಳೆಸುವುದರೊಂದಿಗೆ ಅಮೂಲ್ಯವಾದ ಶಿಷ್ಯಸಂಪತ್ತನ್ನೂ ಬೆಳಿಸಿ ಹರಿದಾಸ ಸಾಹಿತ್ಯ ಬೆಳವಣಿಗೆಗೆ ಅಪರೂಪವಾದ ಕಾಣಿಕೆಯನ್ನು ನೀಡಿದ್ದಾರೆ. ಈ ಸತ್ಪರಂಪರೆಯಲ್ಲಿ ಅನೇಕ ಹರಿದಾಸರುಗಳು ಬಾಳಿ ಬದುಕಿದರು. ಅಂತೆಯೇ ಹರಿದಾಸ ಸಾಹಿತ್ಯಕ್ಕೆ ಅತ್ಯಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ.

ಶ್ರೀವಿಜಯದಾಸರ ಅಪರೂಪವಾದ ಕೃತಿಯೊಂದನ್ನು ನೋಡಿದಾಗ ಅವರ ನಿರ್ಮಲ ಹೃದಯದಿಂದ ಸಹಜವಾಗಿ ಹೊರಹೊಮ್ಮಿದ ಕಾವ್ಯಾತ್ಮಕ, ಭಾವನಾತ್ಮಕ, ಭಕ್ತಿ, ಕರುಣಾರಸ ಪೂರಿತವಾದ ಅಂತರಂಗದ ಕರೆ ಕೇಳಿ ಬರುತ್ತಿದೆ.

ಒಂದು ಕೈಯಲ್ಲಿ ಖಡ್ಗ ಒಂದು ಕೈಯಲ್ಲಿ ಹಲಿಗೆ
ಅಂದವಾಗಿ ಪಿಡಿದು ದಿವಾ ರಾತ್ರಿಯಲ್ಲಿ
ಬಂದು ಬದಿಯಲಿ ನಿತ್ಯ ಬಾರಾಸನಾಗಿ
ಹಿಂದು ಮುಂದುಪದ್ರವಾಗದಂತೆ
ಇಂದಿರೆರಮಣ ಕಾಯುತ್ತಲಿರೆ ಎನಗಾವ
ಬಂದುಗಳಿಲ್ಲ ಧನ್ಯ ಧನ್ಯ
ಕಂದರ್ಪನಯ್ಯ ಸಿರಿವಿಜಯವಿಠಲರೇಯ
ಎಂದೆಂದಿಗಾಪತ್ತು ಬರಲೀಸನೋ ॥

ಈ ಉಗಾಭೋಗದ ಹಿನ್ನಲೆ ಹೋಗಿದೆ. ಒಮ್ಮೆ ಶ್ರೀಗೋಪಾಲದಾಸರು ಉಡುಪಿ ಯಾತ್ರೆ ಕೈಗೊಂಡರು. ಗುರುಗಳಾದ ಶ್ರೀವಿಜಯದಾಸರ ಆಜ್ಞೆ ಪಡೆಯಲು ಅವರ ಬಳಿ ಬಂದರು. ಅಪರೋಕ್ಷಜ್ಞಾನಿಗಳಾದ ಶ್ರೀವಿಜಯರಾಯರು ಪ್ರವಾಸದಲ್ಲಿ ಶಿಷ್ಯನಿಗೆ ಬರಬಹುದಾದ ಆಪತ್ತನ್ನು ತಿಳಿದು ಕೂಡಲೇ ಈ ಉಗಾಭೋಗವನ್ನು ರಚಿಸಿ ಶ್ರೀಗೋಪಾಲದಾಸರಿಗೆ ಪಠಿಸಿಕೊಳ್ಳಲು ಆದೇಶವಿತ್ತರು. ಇದರ ಪಠಣದಿಂದ ಇಷ್ಟಪ್ರಾಪ್ತಿ ಆಗುವುದಲ್ಲದೇ ಅನಿಷ್ಟ ನಿವೃತ್ತಿ ಆಗುವುದು. ಶ್ರೀವಿಜಯರಾಯರು ಸಜ್ಜನವೃಂದದ ಮೇಲೆ ತೋರಿದ ಕರುಣಾಪೂರಿತ ಅನುಗ್ರಹ.

ಶ್ರೀವಿಜಯರಾಯರು ಅನಿರುದ್ಧ ರೂಪಿಯಾದ ಶ್ರೀಹರಿಯನ್ನು ಸ್ತೋತ್ರ ಮಾಡದ್ದಾರೆ. ಸೃಷ್ಟಿಯ ಆದಿಯಲ್ಲಿ ಶ್ರೀಹರಿಯು ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣ, ವಾಸುದೇವ ರೂಪಗಳಿಂದ ಇರುವವನು ಹಾಗೂ ಶ್ರೀಹರಿಯು ಅನಂತ ರೂಪಗಳಿಂದ ಇರುತ್ತಾನೆ. ಇದರಿಂದ ಶ್ರೀಹರಿಯು ಸೃಷ್ಠ್ಯಾದಿಗಳನ್ನು ಮಾಡಿ ಸಜ್ಜೀವಿಗಳನ್ನು ಉದ್ಧರಿಸುವ.

ಶ್ರೀವಿಜಯರಾಯರ ಮೇಲ್ಕಂಡ ಉಗಾಭೋಗದಲ್ಲಿ ಬರುವ ಭಗವದ್ರೂಪ ಅನಿರುದ್ಧ. ಅನಿರುದ್ಧನ ಆಯುಧಗಳು ಶಂಖ, ಚಕ್ರ, ಖಡ್ಗ ಮತ್ತು ಗುರಾಣಿ. ಆ ಆಯುಧಗಳನ್ನು ಹಿಡಿದಿರುವ ಶ್ರೀಹರಿಯು ಅಂದವಾಗಿಯೂ ಇರುವ. ಕಾರಣ ಮನ್ಮಥ ಜನಕನಾದ ಶ್ರೀಹರಿ ಜಗತ್ತನ್ನೇ ಮೋಹಗೊಳಿಸುವ ಸುಂದರ.

ಈ ಅನಿರುದ್ಧ ರೂಪದಿಂದ ದುಷ್ಟಶಕ್ತಿಗಳ ನಾಶಕನಾಗಿ ಭಕ್ತರಿಗೆ ಪ್ರತಿ ಕ್ಷಣ, ಕ್ಷಣಾರ್ಧಗಳಲ್ಲಿ ಒದಗುವ ಆಪತ್ತುಗಳ ಪರಿಹಾರಕನಾಗಿ ಇರುವವನೂ, ಜೀವರ ಹಿಂದೆ – ಮುಂದೆ ಸರ್ವದಾ ಇದ್ದು ಉಪದ್ರವವಾಗದಂತೆ ರಕ್ಷಿಸುವವನೂ, ಪ್ರದ್ಯುಮ್ನ ರೂಪಿ ಶ್ರೀಹರಿ ಭಕ್ತವತ್ಸಲನಾಗಿ ತನ್ನನ್ನು ನಂಬಿದ ಭಕ್ತರನ್ನು ಸರ್ವಕಾಲದಿ ಸಲಹುವವನೂ, ಇವರಿಗೆ ಬಂಧುಗಳೇ ಇಲ್ಲಾ ಅಂದರೆ ಅಡೆತಡೆಗಳು ಬರಲಾರದೆಂದು ಸಾರಿ ಹೇಳಿದ್ದಾರೆ.

ಶ್ರೀಗೋಪಾಲದಾಸರಿಗೆ ಮಂಡಗದ್ದೆ ಭೀಮಪ್ಪನ ಕಾಟಕ್ಕೆ ಬಲಿಯಾಗದಿರಲೆಂದು ಈ ಉಗಾಭೋಗವನ್ನು ಪಠಣ ಮಾಡಲು ಹೇಳಿರುವುದಾಗಿ ಶ್ರೀಗೋಪಾಲದಾಸರ ಚರಿತ್ರೆಯಿಂದ ತಿಳಿದು ಬರುತ್ತದೆ. ಈ ಆಪತ್ತಿನಿಂದ ಹೇಗೆ ಶ್ರೀಗೋಪಾಲದಾಸರು ಪಾರಾಗಿ ಶ್ರೀಕೃಷ್ಣನ ದರ್ಶನ ಪಡೆದರೋ ಹಾಗೇ ಈ ಸ್ತೋತ್ರ ಪಠಣದಿಂದ ಸಕಲ ಸಜ್ಜನರ ಮನೋಭೀಷ್ಟಗಳು ಸಿದ್ಧಿಸಿ ಯೋಗ್ಯತಾನುಸಾರ ಶ್ರೀಹರಿಯ ದರ್ಶನ ಭಾಗ್ಯ ಪಡೆಯುವರೆಂದು ತಿಳಿಯಬೇಕು.

ಶ್ರೀವಿಜಯರಾಯರು ಒಂದು ಉದ್ದೇಶದೊಂದಿಗೆ ತಮ್ಮ ಶಿಷ್ಯರಿಗೆ ರಚಿಸಿಕೊಟ್ಟ ಉಗಾಭೋಗ. ಸರ್ವಕಾಲದಲ್ಲೂ ಸರ್ವರನ್ನೂ ಶ್ರೀಹರಿಯೇ ಸಂರಕ್ಷಿಸುತ್ತಿರುವವನಾದ್ದರಿಂದ ನಮಗಿನ್ನೇತರ ಭಯ? ಶ್ರೀವಿಜಯರಾಯರಿಗೆ ಶ್ರೀಹರಿಯಲ್ಲಿರುವ ಅಚಲವಾದ ಭಕ್ತಿಯೇ ಕಾರಣ. ಅಲ್ಲದೇ ಸಿರಿವಿಜಯವಿಠಲರೇಯನು ಸರ್ವ ಕಾಲದಲ್ಲೂ ಸಜ್ಜನರಿಗೆ ಆಪತ್ತುಗಳು ಬಾರದಂತೆ ನೋಡುವನು ಎಂದು ಎಲ್ಲರಲ್ಲೂ ಶ್ರದ್ಧೆಯನ್ನು ಹುಟ್ಟಿಸಿರುವವರು. ಶ್ರೀಹರಿಯ ಅನಂತರೂಪಗಳೂ ಒಂದೇಯಾದರೂ ಚತುರ್ಭುಜಗಳಲ್ಲಿ ಈ ಆಯುಧಗಳನ್ನು ಧರಿಸಿದ ಪ್ರದ್ಯುಮ್ನರೂಪವನ್ನು ಪ್ರಯಾಣ ಕಾಲದಲ್ಲೂ, ಮಲಗುವಾಗ ಹೀಗೆ ಎಲ್ಲಾ ಕಾಲದಲ್ಲೂ ಧ್ಯಾನಿಸುತ್ತಾ ನಮಗೊದಗುವ ಆಪತ್ತುಗಳನ್ನು ಕಳೆದುಕೊಂಡು ಸಾಧನ ಮಾರ್ಗದಲ್ಲಿರಲು ಶ್ರೀವಿಜಯರಾಯರು ನಮ್ಮಂತ ಪಾಮರರ ಮೇಲೆ ತೋರಿದ ಕಾರುಣ್ಯ.